International Journal of Kannada Research 2019; 5(2): 141-143

International Journal of Kannada Research
www.kannadajournal.com

**ISSN: 2454–5813**
IJKR 2019; 5(2): 141-143
© 2019 IJKR
www.kannadajournal.com
Received: 01-02-2019
Accepted: 03-03-2019

**ಡಾ.ಪ್ರಸನ್ನ ನಂಜಾಪುರ**
ಕನ್ನಡ ಅತಿಥಿ ಉಪನ್ಯಾಸಕ
ಮಹಾರಾಣಿ ವಿಜ್ಞಾನ ಕಾಲೇಜು,
ಬೆಂಗಳೂರು

**Correspondence**
**ಡಾ.ಪ್ರಸನ್ನ ನಂಜಾಪುರ**
ಕನ್ನಡ ಅತಿಥಿ ಉಪನ್ಯಾಸಕ
ಮಹಾರಾಣಿ ವಿಜ್ಞಾನ ಕಾಲೇಜು,
ಬೆಂಗಳೂರು

# ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕದ ವೈಚಾರಿಕ ನಿಲುವು

**ಡಾ.ಪ್ರಸನ್ನ ನಂಜಾಪುರ**

ಪುರಾಣಗಳು ಕಾಲದಿಂದ ಕಾಲಕ್ಕೆ ವಿಮರ್ಶೆ, ವಿಶ್ಲೇಷಣೆ ಮತ್ತು ಪರಿಷ್ಕರಣೆಗೆ ಒಳಗಾಗುತ್ತ ಬಂದಿವೆ. ಪುರಾಣಗಳು ವರ್ತಮಾನದ ಜೀವನ ವಿಧಾನವನ್ನು ಧನಾತ್ಮಕವಾಗಿ ಪ್ರಭಾವಿಸದೇ ಕೇವಲ ತನ್ನ ಕಾಲದ ಮೌಲ್ಯಗಳನ್ನು ಪುನರ್ ಹೇರಿಕೆಯಾಗಿ ಕಂಡುಬಂದಾಗ ಅಂತಹ ಪುರಾಣದ ನಡೆಯನ್ನು ವರ್ತಮಾನದ ಜೀವಪರ ಮೌಲ್ಯಗಳ ವಿವೇಕವು ಯಾವತ್ತೂ ಪ್ರಶ್ನಿಸುತ್ತವೆ. ಅದು ಜೀವಂತ ಸಮಾಜದ ಲಕ್ಷಣ. ಮತ್ತು ಕಾಲದ ಜವಾಬ್ದಾರಿ ಕೂಡ ಆಗಿದೆ. ಏಕೆಂದರೆ ಸತ್ತ ಮೌಲ್ಯಗಳ ಕೈಯಲ್ಲಿ ಚಲನಶೀಲವಾಗಬೇಕಾದ ಜೀವಂತ ಬದುಕನ್ನು ಕೊಡಬಾರದು ಎಂಬುದಾಗಿರುತ್ತದೆ. ಸದ್ಯದ ಬದುಕು ನಿಂತ ನೀರಾಗಬಾರದು, ಅಂದರೆ ಪುರಾಣಗಳಿಂದ ಪ್ರಭಾವಿತಗೊಂಡ ಬದುಕು ಚಲನಶೀಲವಾಗಬೇಕು. ಈ ಚಲನಶೀಲತೆಯೂ ಸಮಕಾಲೀನ ಮೌಲ್ಯಗಳಿಗೆ ಅನುಗುಣವಾಗಿರುತ್ತದೆ. ಚಲನಶೀಲವಾಗಲು ಹಿಂಜರಿಯುವ ಪುರಾಣವು ಸತ್ತ ಪುರಾಣವಾಗುತ್ತದೆ. ಕುವೆಂಪು ಅವರು ಹೇಳುವಂತೆ ಸತ್ತ ಕಲ್ಲುಗಳ ಮುಂದೆ ಅತ್ತು ಕರೆಯಬೇಕಾಗುತ್ತದೆ. ಜಿ.ಎಸ್.ಶಿವರುದ್ರಪ್ಪನವರು ಈ ರೀತಿಯ ಭೂತ ಮತ್ತು ವರ್ತಮಾನದ ಬದುಕನ್ನು ಕುರಿತು "ನಿಂತಿದ್ದರೆ ಪುರಾಣ ಚಲಿಸುತ್ತಿದ್ದರೆ ಚರಿತ್ರೆ" ಎನ್ನುತ್ತಾರೆ. ಅಂದರೆ ಸಮಕಾಲೀನ ಬದುಕು ಚರಿತ್ರಾರ್ಹವಾಗುವಂತಹ ಕ್ರಿಯಾಶೀಲತೆಯನ್ನು ತಂದುಕೊಳ್ಳಬೇಕು. ಆ ಕಾರಣಕ್ಕಾಗಿ ವರ್ತಮಾನವನ್ನು ಪ್ರಭಾವಿಸಲು ಹವಣಿಸುತ್ತಿರುವ ಭೂತವನ್ನು ಪುನರ್ ಮೌಲ್ಯೀಕರಣ ಮಾಡಿಕೊಳ್ಳಬೇಕಾಗುತ್ತದೆ.

ಕುವೆಂಪು ಅವರು ಹಳೇಕಾಲದ ಚಿನ್ನವನ್ನು ಕರಗಿಸಿ ಹೊಸಕಾಲಕ್ಕೆ ತಕ್ಕಂತೆ ಆಭರಣಗಳನ್ನು ಮಾಡಿಕೊಳ್ಳಬೇಕು ಎಂಬ ಅಭಿಪ್ರಾಯಪಟ್ಟವರಾದರೂ ಹಳೇ ಕಾಲದ ಜೀವ ವಿರೋಧಿ ಮೌಲ್ಯಗಳಿಗೆ ತೀಕ್ಷ್ಣ ವೈಚಾರಿಕತೆಯ ಮೂಲಕ ತಮ್ಮ ಸಾಹಿತ್ಯದಲ್ಲಿ ಪ್ರತಿಕ್ರಿಯಿಸಿದ್ದಾರೆ. ಇದು ಪುರಾಣದ ಅಪ್ರಸ್ತುತ ಮೌಲ್ಯಗಳಿಗೆ ನಮ್ಮ ವರ್ತಮಾನ ಮತ್ತು ಭವಿಷ್ಯಗಳು ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಎಚ್ಚರ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಯ ಸಾಂಸ್ಕೃತಿಕ ಬದುಕು ಪುರೋಹಿತಶಾಹಿಗಳ ಕೈಯಲ್ಲಿ ಸಿಕ್ಕು ಕಳೆದುಹೋಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಆಡಳಿತ ಯಂತ್ರವು ಧರ್ಮಶಾಸ್ತ್ರಬದ್ಧ ವ್ಯವಸ್ಥೆಯ ಕೈಯಲ್ಲಿ ಸಿಕ್ಕರೆ ಆಗುವ ಅನಾಹುತಗಳನ್ನು ಮತ್ತು ಪ್ರಭುತ್ವವು ಮಾಡುವ ತಪ್ಪುಗಳನ್ನು ತೋರಿಸಿಕೊಟ್ಟು ಅದನ್ನು ಸೂಕ್ತ ರೀತಿಯಲ್ಲಿ ಎಚ್ಚರಿಸಿ ಸಮಾನತೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕದಲ್ಲಿ ಪ್ರತಿಪಾದಿಸಲಾಗಿದೆ. ಕುವೆಂಪು ಅವರು ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್, ಜಲಗಾರ, ಶ್ರೀರಾಮಾಯಣ ದರ್ಶನಂಗಳಂತಹ ಕೃತಿಗಳಲ್ಲಿ ಪುರಾಣಗಳನ್ನು ವರ್ತಮಾನದ ವಿವೇಕಯುತ ವೈಚಾರಿಕ ದೃಷ್ಟಿಯಲ್ಲಿ ಪುನರ್ ಮೌಲ್ಯಮಾಪನ ಮತ್ತು ಸಮಕಾಲೀನಕ್ಕೆ ತಕ್ಕಂತೆ ಮೌಲ್ಯಗಳ ಪ್ರತಿಪಾದನೆ ಮಾಡಿದ್ದಾರೆ.

ಪ್ರಸ್ತುತ 'ಶೂದ್ರ ತಪಸ್ವಿ' ನಾಟಕವು ಮೂರು ದೃಶ್ಯಗಳನ್ನು ಒಳಗೊಂಡಿರುವ ಪುಟ್ಟ ದೃಶ್ಯಕಾವ್ಯ. ಇದು ರಾಜಕೀಯ ಮತ್ತು ಧಾರ್ಮಿಕ ವ್ಯವಸ್ಥೆಯ ವಿಡಂಬನೆಯಿಂದ ಸಮಕಾಲೀನ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತದೆ. ತನ್ನ ಧಾರ್ಮಿಕ ಅಜೆಂಡವನ್ನು ಈಡೇರಿಸಿಕೊಳ್ಳಲು ಮುಂದಾಗುವ ಪುರೋಹಿತಶಾಹಿಯನ್ನು ಮತ್ತು ರಾಜಕೀಯ ವ್ಯವಸ್ಥೆಯನ್ನು ನಿರ್ವಹಿಸುತ್ತಿರುವ ಆಡಳಿತ ಪ್ರಭುತ್ವವು ಸಕಾಲದಲ್ಲಿ ತೆಗೆದುಕೊಳ್ಳುವ ನಿರ್ಣಯಗಳು ಮತ್ತು ಅದರ ಮನಸ್ಥಿತಿ ಸದ್ಯಕಾಲೀನ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೇಗೆ ಪ್ರಯತ್ನಿಸಿದೆ ಎಂಬುದು ಇಲ್ಲಿ ಮುಖ್ಯವಾಗಿ ಕಂಡುಬರುತ್ತದೆ.

ನಾಟಕದ ಆರಂಭದಲ್ಲಿ ಪ್ರಕೃತಿಯು ಒಂದಾಗಿ ತನ್ನ ಮಡಿಲ ಜೀವಜಂತುಗಳನ್ನು ಭವಿಷ್ಯದಲ್ಲಿ ಎದುರಾಗುವ ಕೇಡಿನಿಂದ ಕಾಯಲು ಅಣಿಯಾಗುತ್ತಿರುವುದು ಮತ್ತು ಆ ವನವನ್ನು ಪ್ರವೇಶಿಸುವ

'ಮೃತ್ಯು'ವನ್ನು ತಡೆದು ಸಂಭವಿಸಲಿರುವ ಹೊಸ ಧಾಮಿಕ, ಸಾಮಾಜಿಕ ವ್ಯವಸ್ಥೆಗೆ ಪೂರಕವಾಗಿ ನಿಲ್ಲುವಂತೆ ಪ್ರೇರೇಪಿಸುತ್ತದೆ. ಮೃತ್ಯುವೂ ಕೂಡ ಈ ಕಾರ್ಯದಲ್ಲಿ ಜೊತೆಯಾದಾಗ ಗುರಿ ಸಾಧಿಸುವುದು ತಡವಾಗುವುದಿಲ್ಲ. ಇಲ್ಲಿ ಒಂದೇ ಕಾರ್ಯಕ್ಕೆ ತೊಡಗಿರುವ ಮನಸ್ಥಿತಿಗಳೂ ಒಬ್ಬರನ್ನೊಬ್ಬರು ಅರಿಯುವುದು ಅಗತ್ಯವಾಗಿದೆ. ಹಾಗಾಗಿಯೇ ಇಲ್ಲಿ ಆರಂಭದಲ್ಲಿಯೇ ಶೋಷಣೆಯ ವಿರುದ್ಧವಾಗಿ ಮೂಡಿರುವ ಎಚ್ಚರ ಮತ್ತು ಸಮೂಹ ಪ್ರಜ್ಞೆಯ ಇರುವನ್ನು ಗುರುತಿಸಬಹುದು. ಇದು ಇರುವ ಯಾವುದೇ ಒಂದು ಜಡತ್ವವನ್ನು ಮೀರುವ ಅಥವಾ ಅದನ್ನು ತೊಡೆದು ಹಾಕಲು ಬೇಕಾಗಿರುವ ವಾತಾವರಣವನ್ನು ನಿರ್ಮಿಸಿಕೊಂಡಿದೆ. ಆರಂಭದ ದೃಶ್ಯವೇ ಪ್ರಾಕೃತಿಕವಾಗಿ ಸಂಚಲನ ಕಂಡುಬರುತ್ತದೆ. ಮುಂದೆ ಹೊಸತೊಂದು ವ್ಯವಸ್ಥೆ ಸಂಭವಿಸುತ್ತಿರುವುದರ ಸೂಚನೆಯಂತೆ ಗಾಳಿ, ಹಕ್ಕಿ, ವನಮೃಗಗಳಲ್ಲಿ ತೀವ್ರತರವಾದ ಚಲನೆ ಕಂಡುಬರುತ್ತದೆ. ಭೈರವ ಮತ್ತು ಮೃತ್ಯುಗಳ ನಡುವಿನ ಸಂಭಾಷಣೆಯಲ್ಲಿ ತಮ್ಮ ತಮ್ಮ ನಡೆಯು ಬೇರೆ ಬೇರೆಯಾಗಿ ಕಂಡರೂ ಗುರಿ ಮತ್ತು ಉದ್ದೇಶ ಒಂದೇ ರೀತಿಯಾಗಿದೆ. ಶಂಭೂಕ ಋಷಿಗೆ ಎದುರಾಗುವ ಕೇಡನ್ನು ತಡೆಯಲು ಮೊದಲೇ ನಿಯೋಜಿತವಾಗಿದ್ದಾರೆ. ಮುಂದೆ ಸಂಭವಿಸುವ ಕ್ರಿಯೆಗೆ ರಾಮನ ನಡೆಯು ನಿಮಿತ್ತ ಮಾತ್ರದಂತೆ ಕಂಡುಬರುತ್ತದೆ. ಮೃತ್ಯುದೇವತೆಗೆ ಮುಂದೆ ನಡೆಯುವುದರ ಅರಿವಿದೆ. ಹಾಗಾಗಿಯೇ ಈ ಎಚ್ಚರಿಕೆ ಇದೆ.

ಎರಡನೇ ದೃಶ್ಯದಲ್ಲಿ ಹಾವು ಕಡಿದು ಸತ್ತಿರುವ ತನ್ನ ಮಗನನ್ನು ಅರಸುತ್ತಾ ಬರುವ ಬ್ರಾಹ್ಮಣ ತನ್ನ ಮಗನ ಸಾವಿಗೆ ಶೂದ್ರನಾದ ಶಂಭೂಕ ಮಹರ್ಷಿಯು ಶಾಸ್ತ್ರಬಾಹಿರವಾಗಿ ತಪಸ್ಸು ಮಾಡುತ್ತಿರುವುದೇ ಕಾರಣ ಎಂಬುದಾಗಿ ದೂರುತ್ತಾನೆ. ಮತ್ತು ಅದನ್ನು ತನ್ನ ಧರ್ಮಶಾಸ್ತ್ರಕ್ಕನುಗುಣವಾಗಿ ವ್ಯಾಖ್ಯಾನಿಸುತ್ತಾನೆ. ಇಲ್ಲಿ ಒಂದು ಶಾಸ್ತ್ರಕ್ಕೆ ಅನುಗುಣವಾಗಿ ಬದುಕುವ ಒಂದು ಗೊತ್ತಾದ ಬದುಕು ಹಾಗೂ ಪ್ರಾಕೃತಿಕ ಬದುಕು ಈ ಎರಡರ ನಡುವಿನ ವೈಚಾರಿಕ ಸಂಘರ್ಷವಿದೆ. ಆದರೆ ಅಂತಿಮವಾಗಿ ಗೆಲ್ಲುವುದು ಧಾರ್ಮಿಕ ಅಜೆಂಡದಿಂದ ಅತೀತವಾಗಿರುವ ಪ್ರಾಕೃತಿಕ ಬದುಕೇ ಆಗಿದೆ. ಆದರೆ ಸತ್ತ ಮಗ ಕೊನೆಯಲ್ಲಿ ಬದುಕುವುದು ರಾಜಕೀಯ ವ್ಯವಸ್ಥೆಯ ಭಾಗವಾಗಿದೆ. ತನಗೆ ಎದುರಾಗುವ ಕೇಡನ್ನು ಅರ್ಥೈಸಿಕೊಳ್ಳುವಲ್ಲಿ ಸೋಲುವ ಶಾಸ್ತ್ರಬದ್ಧ ಬದುಕಿನ ಭ್ರಮೆಯೊಳಗೆ ವರ್ಣ ವ್ಯವಸ್ಥೆಯು ಜಾಗೃತವಾಗಿ ಶಂಭೂಕನ ಬಲಿಯನ್ನು ಬಯಸಿದೆ. ಅದಕ್ಕಾಗಿ ರಾಜನಾದ ಶ್ರೀರಾಮನಲ್ಲಿ ಬ್ರಾಹ್ಮಣ ತನ್ನ ಮಗನ ಸಾವಿಗೆ ಶೂದ್ರನೊಬ್ಬ ತಪಸ್ಸು ಮಾಡುತ್ತಿರುವುದೇ ಕಾರಣ ಎಂಬುದಾಗಿ ದೂರುತ್ತಾನೆ. ಇಲ್ಲಿ ತನ್ನ ಮಗ ಎನ್ನುವುದಕ್ಕಿಂತಲೂ ರಾಮನನ್ನು ಕುರಿತು ನಿನ್ನ ಬಾಲಪ್ರಜೆ ಎನ್ನುತ್ತಾನೆ. ಇಲ್ಲಿ ಬ್ರಾಹ್ಮಣನು ಪ್ರಭುತ್ವದೊಂದಿಗೆ ಮಾತನಾಡುವಾಗ ಆ ವ್ಯವಸ್ಥೆಯು ಇಷ್ಟಪಡುವಂತಹ ಪರಿಭಾಷೆಯಲ್ಲಿಯೇ ಮಾತನಾಡುತ್ತಾನೆ. ಜೊತೆಗೆ ರಾಮನ ಭೂತಕಾಲದ ಬದುಕಿನ ಘಟನೆಗಳನ್ನು ನೆನಪಿಸುವುದರ ಮೂಲಕ ಭಾವನಾತ್ಮಕವಾಗಿ ಪ್ರಚೋದಿಸುವ ಕೆಲಸವು ನಡೆಯುತ್ತದೆ. ಆದರೆ ಪ್ರಭುತ್ವದಲ್ಲಿ ಜಾಗೃತಗೊಂಡಿರುವ ವಿವೇಕವು ಬ್ರಾಹ್ಮಣನ ಮನಪರಿವರ್ತನೆಗೆ ಕಾರಣವಾಗುತ್ತದೆ. ಇಲ್ಲಿ ಇವರಿಬ್ಬರ ನಡುವಿನ ಸಂಭಾಷಣೆಯನ್ನು ಗಮನಿಸಿದರೆ ಪುರೋಹಿತಶಾಹಿಯು ಪ್ರಭುತ್ವವನ್ನು ಹೊಗಳಿಕೆಯ ಮೂಲಕ ಓಲೈಸುವುದು ಮತ್ತು ಆ ಮೂಲಕ ತನ್ನ ಮಗನ ಸಾವಿಗೆ ಪ್ರತಿಯಾಗಿ ಪ್ರತಿಕಾರ ತೀರಿಸಿಕೊಳ್ಳಲು ಹವಣಿಸಿದೆ. ಅದಕ್ಕಾಗಿಯೇ ಶಂಭೂಕನನ್ನು ಕೊಲ್ಲಲು ರಾಮನನ್ನು ಪ್ರಚೋದಿಸುತ್ತಾನೆ. ಅಂತಿಮವಾಗಿ ಏನೇ ಆದರೂ ಇಲ್ಲಿ ಎಲ್ಲವನ್ನೂ ಸಮನಾಗಿ ನೋಡಬೇಕಾದ ಪ್ರಭುತ್ವವು ಕೂಡ ಯಾವುದೋ ಒಂದು ವರ್ಗದ ಪರವಾಗಿ ವರ್ತಿಸುವುದನ್ನು ಶ್ರೀರಾಮನ ಬಾಣ ಪ್ರಯೋಗದ ಮೂಲಕ ಕಾಣಬಹುದು. ಬಾಣ ಪ್ರಯೋಗಕ್ಕೆ ಕೊಲ್ಲುವ ಉದ್ದೇಶ ಇಲ್ಲದಿದ್ದರೂ ಕೂಡ ಆ ರೀತಿಯ ವರ್ತನೆಯಲ್ಲಿ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಂಡಿರುವಂತೆ ಕಾಣುತ್ತದೆ. ಇದು ಇಂದಿನ ರಾಜಕೀಯ ವ್ಯವಸ್ಥೆಯ ಮನಸ್ಥಿತಿಯನ್ನು ಬಿಂಬಿಸುತ್ತದೆ. ಕೊನೆಯಲ್ಲಿ ಬ್ರಾಹ್ಮಣನ ಸತ್ತ ಮಗ ಬದುಕುವುದು ಪ್ರಭುತ್ವದ ಹಿತಚಿಂತನೆಯಂತೆ ಕಂಡುಬರುತ್ತದೆ.

ರಾಮನು ಇಲ್ಲಿ ಬ್ರಾಹ್ಮಣನನ್ನು ಕುರಿತು ವರ್ಣಗರ್ವಾಂಧ, ಶಾಸ್ತ್ರಮೂರ್ಖ ಎನ್ನುತ್ತಾನೆ. ಆದರೆ ಇದು ಅಂತರಂಗದಲ್ಲಿ, ಬಹಿರಂಗದಲ್ಲಿ ದ್ವಿಜೋತ್ತಮ ಎನ್ನುತ್ತಾನೆ. ಅಂತರಂಗ ಪ್ರಕಟವಾಗದೇ ಇರುವುದಕ್ಕೆ ಪಟ್ಟಭದ್ರ ಹಿತಾಶಕ್ತಿಯೂ ಕಾರಣವಿರಬಹುದು. ಶಂಭೂಕನನ್ನು ಮಹಾಯೋಗಿ ಎನ್ನುವುದನ್ನು ನೋಡಿದಾಗ ರಾಮನ ಮಾತುಗಳಲ್ಲಿ ಸಮತೋಲನದ ಅಂಶಗಳು ಕಾಣಿಸುತ್ತವೆ. ಧಾರ್ಮಿಕ ರಾಜಕಾರಣದೊಳಗಿನ ಇಂದಿನ ವ್ಯವಸ್ಥೆಯಲ್ಲಿ ಈ ರೀತಿಯ ವರ್ತನೆ ಸಹಜವಾಗಿಯೇ ಇದೆ. ಆದರೆ ಇಲ್ಲಿ ತೀವ್ರ ವೈಚಾರಿಕತೆ ಕಾಣುವುದಿಲ್ಲ. ಬದಲಿಗೆ ಪರಿವರ್ತನೆಯ ವಿವೇಕವಿದೆ. ನಾಟಕದ ಉದ್ದೇಶವೂ ಅದೇ ಆದಂತಿದೆ. ಈ ಪರಿವರ್ತನೆಯಲ್ಲಿ ನೇರವಾಗಿ ನಡೆದುಕೊಳ್ಳದ ರಾಮ ನಾಟಕೀಯವಾಗಿ ಬ್ರಾಹ್ಮಣನ ಮಾತಿನಂತೆ ನಡೆದುಕೊಂಡಾಗ ಅದರಿಂದ ಶಂಭೂಕನಿಗೆ ಉಂಟಾಗುವ ಕೇಡನ್ನು ತಡೆಯಲು ಮೃತ್ಯದೇವತೆ ಸ್ವಯಂ ನಿಯೋಜನೆಗೊಂಡಿದ್ದಾಳೆ. ಆಗ ರಾಮ ತನ್ನ ವಿವೇಕವನ್ನು ಪ್ರಕಟಿಸಬೇಕಾದ ಅನಿವಾರ್ಯತೆ ಏರ್ಪಡುತ್ತದೆ.

ಮೂರನೇ ದೃಶ್ಯದಲ್ಲಿ ನಾಟಕದ ತಾತ್ವಿಕತೆಯು ನಿರ್ಣಾಯಕ ಹಂತಕ್ಕೆ ತಲುಪುತ್ತದೆ. ಇಲ್ಲಿ ಜಾಗೃತಿ ಮತ್ತು ಪರಿವರ್ತನೆಗಳು ಸಂಭವಿಸುತ್ತವೆ. ಶೋಷಕ ಮನಸ್ಸನ್ನು ಪರಿವರ್ತನೆಗೆ ಅವಕಾಶ ಮಾಡಿಕೊಡುವುದು ಅದಕ್ಕಾಗಿ ಶೋಷಿತರು ಜಾಗೃತವಾಗ ಬೇಕಾಗಿರುವುದನ್ನು ಪ್ರತಿಪಾದಿಸುತ್ತದೆ. ಧ್ಯಾನಸ್ಥ ಸ್ಥಿತಿಯಲ್ಲಿದ್ದ ಪ್ರಶಾಂತ ವನವನ್ನು ಕದಡುವ ಧರ್ಮಶಾಸ್ತ್ರವು ನಂತರದಲ್ಲಿ ತಾನೇ ಶರಣಾಗತವಾಗುತ್ತದೆ. ರಾಮನ ಬಾಣವು ಶಂಭೂಕನಿಗೆ ವಂದಿಸಿ, ಬ್ರಾಹ್ಮಣನತ್ತಲೇ ಬರುತ್ತದೆ. ಆದರೆ ಕೊಲ್ಲುವುದಿಲ್ಲ. ಬದಲಾಗಿ ಅವನಲ್ಲಿದ್ದ ಅವಿವೇಕದ ನಡೆಯನ್ನು ಕೊಲ್ಲುತ್ತದೆ. ಕೊನೆಗೆ "ಆರಾದರೇನ್ ಆರಾದ್ಯರ್ ತಪೋಧನರ್! ನಮಸ್ಕಾರಮೇ ಪುಣ್ಯಂ, ತಿರಸ್ಕಾರಮೆ ಪಾಪಂ!" ಎಂಬುದಾಗಿ ಎಲ್ಲರನ್ನು ಒಳಗೊಳ್ಳುವ ವಿವೇಕವನ್ನು ರಾಮ ಪ್ರಕಟಿಸುತ್ತಾನೆ. ಒಟ್ಟಿನಲ್ಲಿ ಈ ನಾಟಕವು ಶೋಷಣೆಯನ್ನು ಪ್ರತಿಪಾದಿಸುವ ಶಾಸ್ತ್ರಬದ್ಧ ನಡೆಯನ್ನು, ವರ್ಣಭ್ರಾಂತಿಯನ್ನು ಅಹಿಂಸೆಯ ಮೂಲಕ ಪರಿವರ್ತನೆ ಮಾಡಲು ಹೊರಟಿರುವ ವಿವೇಕಯುತ ನಡೆಯಾಗಿ ಕಾಣುತ್ತದೆ.

ಶಂಭೂಕನನ್ನು ಕುರಿತ ಈ ವಸ್ತು ನಮ್ಮ ಕವಿ ಪರಂಪರೆಯಲ್ಲಿ ಅನೇಕ ರೀತಿಯಲ್ಲಿ ನಿರ್ವಹಣೆಗೊಂಡಿದೆ. ವಾಲ್ಮೀಕಿ ರಾಮಾಯಣದ ಉತ್ತರಖಾಂಡದಲ್ಲಿ ವರ್ಣಾಶ್ರಮ ಧರ್ಮದ ಪಾಲಕನಾದ ರಾಮ ಶಂಭೂಕನನ್ನು ಕೊಲ್ಲುತ್ತಾನೆ. ಭವಭೂತಿಯ ಉತ್ತರರಾಮ ಚರಿತದಲ್ಲಿ ಶಂಭೂಕನನ್ನು ಕೊಂದರೂ ಅದರಿಂದ ಗಂಧರ್ವನೊಬ್ಬ ಹೊರಬರುವಂತೆ ಮಾಡಿ ಆ ಕೃತ್ಯಕ್ಕೊಂದು ಸಮರ್ಥನೆಯನ್ನು ಕೊಡಲಾಗಿದೆ. ಆದರೆ ಆಧುನಿಕ ಕಾಲ ಘಟ್ಟದಲ್ಲಿ ಬಂದ ಕುವೆಂಪುರವರ ಈ ಶೂದ್ರತಪಸ್ವಿ ನಾಟಕದಲ್ಲಿ ಬಾಣಪ್ರಯೋಗವಿದೆಯೇ ಹೊರತು ಶಂಭೂಕನನ್ನು ಕೊಲ್ಲುವುದಿಲ್ಲ. ಇಂತಹ ಬದಲಾವಣೆಗಳು ಆಯಾ ಕಾಲಘಟ್ಟದ

ಎಚ್ಚರಿಕೆಯಾಗಿವೆ. ಈ ವಸ್ತುವನ್ನು ಇನ್ನು ಮುಂದೆ ಯಾರಾದರೂ ಹೊಸದಾಗಿ ನಿರ್ವಹಿಸಿದರೆ ಬಾಣ ಪ್ರಯೋಗವು ಇರುವುದಿಲ್ಲ ಎಂಬಂತೆ ಚಿತ್ರಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ಅದು ಆ ಕಾಲದ ವಿವೇಕವಾಗಿರುತ್ತದೆ.